ದಿನಾಂಕಃ 29.11.2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ

ಅಪಘಾತವನ್ನು ನಾನು ನೋಡಿರುವುದಿಲ್ಲ. ಅಪಘಾತದ ಬಗ್ಗೆ ನಾನು ಕೇಳಿ ತಿಳಿದುಕೊಂಡೆನು. ಅಪಘಾತದ ಸಮಯದಲ್ಲಿ ನನ್ನ ಇಬ್ಬರು ಮಕ್ಕಳು ಟಿವಿಎಸ್ ಎಕ್ಸೆಲ್‌ನಲ್ಲಿ ಹೋಗುತ್ತಿದ್ದರು ಎಂದರೆ ಸರಿ. ನನ್ನ ಮಕ್ಕಳ ಹೆಸರು ಅರುಣ್‌ಕುಮಾರ್ ಹಾಗೂ ನರಸಿಂಹಮೂರ್ತಿ. ಅರುಣ್‌ಕುಮಾರ್ 8ನೇ ತರಗತಿಯಲ್ಲಿ ಹಾಗೂ ನರಸಿಂಹಮೂರ್ತಿ 6ನೇ ತರಗತಿಯಲ್ಲಿ ಒದುತ್ತಿದ್ದರು. ಟಿವಿಎಸ್ ಎಕ್ಸೆಲ್‌ನ್ನು ನನ್ನ ಮಗ ಅರುಣ್‌ಕುಮಾರ್‌ರವರು ಒಡಿಸುತ್ತಿದ್ದರು ಎಂದರೆ ಸರಿ. ಅವರ ಬಳಿ ಡಿಎಲ್ ಇರಲಿಲ್ಲ ಎಂದರೆ ಸರಿ. ಅ ದಿನ ಅವರಿಬ್ಬರು ಹೆಲ್ಮೇಟ್ ದರಿಸಿರಲಿಲ್ಲ ಎಂದರೆ ಸರಿ. ಟ್ಯಾಂಕರ್ ಲಾರಿ ಡಿಕ್ಕಿ ಮಾಡಿದ ಪರಿಣಾಮ ಟಿವಿಎಸ್ ಎಕ್ಸೆಲ್ ವಾಹನದ ಮಡ್‌ಗಾರ್ಡ್ ಹಾಗೂ ಬಂಪರ್ ಜಖಂ ಗೊಂಡಿತ್ತು, ಟಿವಿಎಸ್ ಎಕ್ಸೆಲ್ ವಾಹನ ನನಗೆ ಸೇರಿತ್ತು, ಅದಕ್ಕೆ ಸಂಬಂದಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆಯಿಲ್ಲ, ಅಪಘಾತದಿಂದ ನನ್ನ ಟಿವಿಎಸ್ ಎಕ್ಸೆಲ್ ವಾಹನಕ್ಕೆ ಯಾವುದೇ ಜಖಂ ಅಗಿರಲಿಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ನಂತರ ಅಪಘಾತ ಸ್ಥಳವನ್ನು ನಾನು ನೋಡಿರುತ್ತೇನೆ. ಅಪಘಾತದ ಸ್ಥಳವು ರಾಷ್ಟ್ರೀಯ ಹೆದ್ದಾರಿಯಾಗಿರುತ್ತದೆ ಎಂದರೆ ಸರಿ. ಅಪಘಾತವಾದ ಸ್ಥಳದ ರಸ್ತೆಯಲ್ಲಿ ಅರ್ಧ ರಸ್ತೆ ವಾಹನ ಸಂಚಾರಕ್ಕೆ ಬಿಟ್ಟಿದ್ದು ಇನ್ನು ಉಳಿದ ಅರ್ಧ ರಸ್ತೆಯಲ್ಲಿ ಟಾರ್ ಹಾಕುತ್ತಿದ್ದರು ಎಂದರೆ ಸರಿಯಲ್ಲ, ನನ್ನ ಮಗನಿಗೆ ವಾಹನ ಚಲಾಯಿಸಲು ಬರದ ಕಾರಣ ಅವರೇ ಮಣ್ಣಿನ ರಸ್ತೆಗೆ ಹೋಗಿ ಸ್ಕಿಡ್ ಅಗಿ ಬಿದ್ದಿರುತ್ತಾರೆಂದರೆ ಸರಿಯಲ್ಲ, ಅಪಘಾತ ನೋಡಿದವರನ್ನು ಸಾಕ್ಷಿ ಮಾಡಿಸಲು ತೊಂದರೆಯಿಲ್ಲ, ನನ್ನ ಇನ್ನೊಬ್ಬ ಮಗ ಅರುಣ್‌ಕುಮಾರ್‌ರವರನ್ನು ಪಕ್ಷಗಾರರನಾಗಿ ಮಾಡಿರುವುದಿಲ್ಲ ಎಂದರೆ ಸರಿ 2ನೇ ಅರ್ಜಿದಾರರು ನನ್ನ ಹೆಂಡತಿ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ, ನಿಪಿ 11ನ್ನು ಪರಿಹಾರಕ್ಕಾಗಿ ಸೃಷ್ಟಿಸಿ ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ, ನನಗೆ ಇನ್ನೊಂದು ಹೆಂಡತಿ ಹಾಗೂ ಇನ್ನೊಬ್ಬ ಮಗ ಇದ್ದಾನೆಂದರೆ ಸರಿಯಲ್ಲ, ಸುಬ್ರಮಣ್ಯ ಎನ್ನುವವರು ನನ್ನ ಮಗ ಎಂದರೆ ಸರಿಯಲ್ಲ, ಸುಬ್ರಮಣ್ಯರವರು ಪೋಲಿಸರ ಮುಂದೆ ನಾನು 2ನೇ

ಮದುವೆಯಾಗಿರುತ್ತೇನೆ ಹೇಳಿಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸುಬ್ರಮಣ್ಯರವರನ್ನು ಸಾಕ್ಷಿ ಮಾಡಿಸಲು ತೊಂದರೆಯಿಲ್ಲ.

ನಾನು ಬಳೆ ವ್ಯಾಪಾರ ಮಾಡುತ್ತಿದ್ದೇನೆ. ನನ್ನ ಅದಾಯದಿಂದ ನಾನು ಜೀವನ ಸಾಗಿಸುತ್ತಿದ್ದೇನೆಂದರೆ ಸರಿಯಲ್ಲ. ರೂ ಎರಡುವರೆ ಲಕ್ಷ ನಾನು ತಿಥಿ ಕಾರ್ಯಗಳಿಗೆ ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಕೆಲಸ ಮಾಡುತ್ತಿದ್ದ ಎಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗನ ದುಡಿಮೆಯಿಂದ ನಾನು ಜೀವನ ಸಾಗಿಸುತ್ತಿರಲ್ಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂದಿಸಿದಂತೆ ಬೇರೆ ನ್ಯಾಯಾಲಯದಲ್ಲಿ ನಾನು ಸಾಕ್ಷಿ ನುಡಿದಿರುವುದಿಲ್ಲ. ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

1ನೇ ಎದುರುದಾರರು ಹಾಗೂ ಅವರ ಪರ ವಕೀಲರು ಗೈರು ಹಾಜರು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಒ ಹೇ ಕೇ ಸ ಇದೆ

17ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ